ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**C**

**CCE PF**
**CCE PR**
**NSR & NSPR**

Question Paper Serial No. **302**

**ಸಂಕೇತ ಸಂಖ್ಯೆ : 95-K**

**Code No. : 95-K**

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಮಾಧ್ಯಮ / Kannada Medium)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Fresh & Private Repeater / NSR & NSPR)**

ದಿನಾಂಕ : 04. 04. 2022 ] [ Date : 04. 04. 2022

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.



ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ರಷ್ಯನ್ನರು ಇವರ ತತ್ವಗಳಿಂದ ಪ್ರಭಾವಿತರಾಗಿದ್ದರು

   (A) ವೋಲ್ಟೇರ್

   (B) ರೂಸ್ಸೋ

   (C) ಕಾರ್ಲ್‌ಮಾರ್ಕ್ಸ್

   (D) ಮಾಂಟೆಸ್ಕ್ಯೂ

2. ಪ್ರಜಾಪ್ರಭುತ್ವದ ಯಶಸ್ಸು ಅವಲಂಬಿಸಿರುವುದು ಆ ದೇಶದ ಜನತೆಯ

   (A) ಶಿಕ್ಷಣವನ್ನು

   (B) ಅನಕ್ಷರತೆಯನ್ನು

   (C) ಆರ್ಥಿಕತೆಯನ್ನು

   (D) ನಿರುದ್ಯೋಗವನ್ನು

3. ಸಾಮಾಜಿಕ ಬದಲಾವಣೆಯನ್ನು ತರುವ ಅತ್ಯಂತ ಪ್ರಭಾವಶಾಲಿ ಮಾಧ್ಯಮ

(A) ದೂರವಾಣಿ

(B) ದೂರದರ್ಶನ

(C) ಶಿಕ್ಷಣ

(D) ಸಮಾಜ

4. 'ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ' ಎಂಬ ಪುಸ್ತಕವನ್ನು ಬರೆದವರು

(A) ಗಾಂಧೀಜಿ

(B) ನೆಹರೂ

(C) ದಯಾನಂದ ಸರಸ್ವತಿ

(D) ಜಿ.ಎಸ್. ಗುರ್ರೆ

5. ಕ್ಯಾಸ್ಟ್ ಎನ್ನುವ ಪದ ಪೋರ್ಚುಗೀಸ್ ಮತ್ತು ಸ್ಪ್ಯಾನಿಷ್ ಭಾಷೆಯ ಈ ಪದದಿಂದ ಬಂದಿದೆ

(A) ಪ್ರಾಂತ್ಯ

(B) ಕ್ಯಾಸ್ಟಾ

(C) ಕಮ್ಯುನಿಟಿ

(D) ಕೋಸ್ಟ್

6. ಆದಿವಾಸಿಗಳನ್ನು 'ಹಿಂದುಳಿದ ಹಿಂದುಗಳು' ಎಂದು ಕರೆದವರು

(A) ಡಿ.ಎನ್. ಮಜುಂದಾರ್

(B) ಬೊಗಾರ್ಡಸ್

(C) ನಂಜುಂಡಯ್ಯ

(D) ಜಿ.ಎಸ್. ಗುರ್‍ರ್ಯೆ

7. ಬುಡಕಟ್ಟುಗಳ ಬಗ್ಗೆ 'ದಿ ಬೈಗಾ' ( The Baiga ) ಎಂಬ ಪುಸ್ತಕವನ್ನು ಪ್ರಕಟಿಸಿದವರು

(A) ಎ.ಎ.ಡಿ. ಲೂಯಿಸ್

(B) ನಾಡೆಲ್

(C) ವೆರಿಯರ್ ಎಲ್ವಿನ್

(D) ಬೋಗಾರ್ಡಸ್

8. ಬಾಲಗಂಗಾಧರ ತಿಲಕರು ಪ್ರಕಟಿಸಿದ ಪತ್ರಿಕೆ

(A) ಹರಿಜನ

(B) ಬಾಂಬೆ ಸಮಾಚಾರ

(C) ಕೇಸರಿ

(D) ಬೆಂಗಾಲ್ ಗೆಜೆಟ್

9. ಹಿಟ್ಲರ್ ವಿರುದ್ಧ ಹೋರಾಡಲು ಮಿತ್ರರಾಷ್ಟ್ರಗಳ ಗುಂಪು ಪರಿಣಾಮಕಾರಿಯಾಗಿ ಬಳಸಿದ ಸಮೂಹ ಮಾಧ್ಯಮ

(A) ದೂರದರ್ಶನ

(B) ಅಂತರ್ಜಾಲ (ಇಂಟರ್‌ನೆಟ್)

(C) ಸಮಾಚಾರ ಪತ್ರಿಕೆ

(D) ರೇಡಿಯೋ

10. 'ಭಾರತದ ಸಿಲಿಕಾನ್ ವ್ಯಾಲಿ' ಎಂದು ಹೆಸರಾಗಿರುವ ನಗರ

(A) ಹೈದರಾಬಾದ್

(B) ಬೆಂಗಳೂರು

(C) ಚೆನ್ನೈ

(D) ಕೋಲ್ಕತ

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| *A*-ಪಟ್ಟಿ | | *B*-ಪಟ್ಟಿ | |
|---|---|---|---|
| (A) | ಬ್ರಹ್ಮ ಸಮಾಜ | (i) | ಮಹರ್ಷಿ ಕರ್ವೆ |
| (B) | ಆರ್ಯ ಸಮಾಜ | (ii) | ರಾಜಾ ರಾಮ್‌ಮೋಹನ್ ರಾಯ್ |
| (C) | ಎಸ್.ಎನ್.ಡಿ.ಟಿ. ಮಹಿಳಾ ವಿಶ್ವವಿದ್ಯಾಲಯ | (iii) | ಸ್ವಾಮಿ ವಿವೇಕಾನಂದ |
| (D) | ಶ್ರೀ ರಾಮಕೃಷ್ಣ ಮಿಷನ್ | (iv) | ಸಾವಿತ್ರಿ ಬಾಫುಲೆ |
| (E) | ಭಾರತದ ಮೊದಲ ಶಿಕ್ಷಕಿ | (v) | ದಯಾನಂದ ಸರಸ್ವತಿ |
| | | (vi) | ಸರೋಜಿನಿ ನಾಯ್ಡು |
| | | (vii) | ನಿವೇದಿತ |

**III. ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಸಾಮಾಜಿಕ ಬದಲಾವಣೆ ಎಂದರೇನು ?

13. ಕೈಗಾರಿಕೀಕರಣ ಎಂದರೇನು ?

14. ಆಧುನೀಕರಣದ ಮುಖ್ಯ ಗುರಿ ಏನು ?

15. ಬೌದ್ಧ ಧರ್ಮದ ಸ್ಥಾಪಕನನ್ನು ಹೆಸರಿಸಿ.

16. ವಚನ ಚಳವಳಿಯು ಯಾವಾಗ ಪ್ರಾರಂಭವಾಯಿತು ?

17. 'ಅಸ್ಪೃಶ್ಯತೆಯ ಆಚರಣೆ ಪಾಪ' ಎಂದು ಹೇಳಿದವರು ಯಾರು ?

18. ಬುಡಕಟ್ಟುಗಳು ಎಂದರೇನು ?

19. ರಾಜ್ಯದ ಯಾವುದೇ ಭಾಗವನ್ನು ಅನುಸೂಚಿತ ಪ್ರದೇಶ ಎಂದು ಘೋಷಿಸುವ ಅಧಿಕಾರ ಯಾರಿಗೆ ಇದೆ ?

20. ಎರಡನೇ ಬುಡಕಟ್ಟು ಆಯೋಗದ ಅಧ್ಯಕ್ಷರು ಯಾರು ?

21. ಬ್ಲಾಕ್ ಪದ್ಧತಿ ಎಂದರೇನು ?

22. ಸಮೂಹ ಮಾಧ್ಯಮ ಎಂದರೇನು ?

23. ಮೂಕನಾಯಕ ಪತ್ರಿಕೆಯನ್ನು ಪ್ರಕಟಿಸಿದವರು ಯಾರು ?

24. ಕಂಪ್ಯೂಟರ್ ಅನಕ್ಷರಸ್ಥರು ಎಂದರೆ ಯಾರು ?

25. ವಯಸ್ಕರ ಶಿಕ್ಷಣವನ್ನು ಏಕೆ ಜಾರಿಗೆ ತರಲಾಯಿತು ?

26. ಮಿಲ್ಲರ್ ವರದಿಯನ್ನು ಆಧರಿಸಿ ಬ್ರಾಹ್ಮಣೇತರರಿಗೆ ಮೀಸಲಾತಿಯನ್ನು ನೀಡಿದವರು ಯಾರು ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**24 × 2 = 48**

27. ಸಂಪರ್ಕ ಸಾಧನಗಳನ್ನು ಹೆಸರಿಸಿ.

28. ಕೈಗಾರಿಕೀಕರಣದ ಯಾವುದಾದರೂ ಎರಡು ಪರಿಣಾಮಗಳನ್ನು ತಿಳಿಸಿ.

29. ಪಕ್ಕಾ ಮತ್ತು ಕಚ್ಚಾ ಆಹಾರಕ್ಕಿರುವ ವ್ಯತ್ಯಾಸವೇನು ?

30. ಅಸ್ಪೃಶ್ಯರ ಹಕ್ಕುಗಳನ್ನು ಎತ್ತಿಹಿಡಿಯಲು ಅಂಬೇಡ್ಕರರು ಸಂಘಟಿಸಿದ ಚಳವಳಿಗಳು ಯಾವುವು ?

31. ಜಾತಿ ಪದ್ಧತಿಯಲ್ಲಿ ಬದಲಾವಣೆಗೆ ಕಾರಣವಾದ ಯಾವುದಾದರೂ ಎರಡು ಅಂಶಗಳನ್ನು ತಿಳಿಸಿ.

32. ಯಾವ ಅಂಶಗಳು ಜಾತಿ ಪಂಚಾಯಿತಿಗಳ ಕಾರ್ಯಾಚರಣೆಯನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿವೆ ?

33. ವೇದಗಳ ಕಾಲದ ಪ್ರಸಿದ್ಧ ಮಹಿಳೆಯರನ್ನು ಹೆಸರಿಸಿ.

34. ಸ್ತ್ರೀ–ಪುರುಷರ ಅನುಪಾತದಲ್ಲಿ ಆಗಿರುವ ವ್ಯತ್ಯಾಸಕ್ಕೆ ಕಾರಣಗಳೇನು ?

35. ಮಹಿಳೆಯರ ಶಿಕ್ಷಣಕ್ಕೆ ಹಂಟರ್ ಆಯೋಗದ ಕೊಡುಗೆಗಳೇನು ?

36. ಹಿಂದೂ ವಿವಾಹ ಕಾಯ್ದೆಯು ಸಮಾನತೆಯನ್ನು ಬೆಂಬಲಿಸುತ್ತದೆ. ಹೇಗೆ ?

37. ಭಾರತದಲ್ಲಿ ಬುಡಕಟ್ಟುಗಳಿಗಿರುವ ವಿವಿಧ ಹೆಸರುಗಳು ಯಾವುವು ?

38. ಬುಡಕಟ್ಟುಗಳ ಸಾಂಪ್ರದಾಯಿಕ ತಂತ್ರಜ್ಞಾನವನ್ನು ರಕ್ಷಿಸುವುದು ಅಗತ್ಯವಾಗಿದೆ. ಏಕೆ ?

39. ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ ಜೀವನದ ಮೇಲೆ ಪ್ರಭಾವಬೀರುವ ಅಂಶಗಳಾವುವು ?

40. ರೇಡಿಯೋ ಒಂದು ಸಮೂಹ ಮಾಧ್ಯಮವಾಗಿ ಹೇಗೆ ಪಾತ್ರವಹಿಸುತ್ತದೆ ?

41. ಅನಿಯೋಜಿತ ಬದಲಾವಣೆ ಎಂದರೇನು ?

42. ಸಾಮಾಜಿಕ ಬದಲಾವಣೆಗೆ ಪ್ರೇರಕವಾದ ಅಂಶಗಳು ಯಾವುವು ?

43. ಜಾತಿ ಪದ್ಧತಿಯ ಯಾವುದಾದರೂ ಎರಡು ಗುಣಲಕ್ಷಣಗಳನ್ನು ತಿಳಿಸಿ.

44. ಭಾರತದಲ್ಲಿ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿದ ಸಮಾಜ ಸುಧಾರಕರನ್ನು ಹೆಸರಿಸಿ.

45. ಭಾರತದ ಆದಿವಾಸಿ ಮಹಿಳೆಯರ ಪ್ರಮುಖ ಸಮಸ್ಯೆಗಳಾವುವು ?

46. ಮಹಿಳೆಯರ ಆಸ್ತಿಗೆ ಸಂಬಂಧಿಸಿದ ಕಾನೂನುಗಳನ್ನು ತಿಳಿಸಿ.

47. ಬುಡಕಟ್ಟು ಜನರ ಅವನತಿಗೆ ಯಾವುದಾದರೂ ಎರಡು ಕಾರಣಗಳನ್ನು ತಿಳಿಸಿ.

48. ಕರ್ನಾಟಕದಲ್ಲಿ ಬುಡಕಟ್ಟು ಅಧ್ಯಯನ ಮಾಡುತ್ತಿರುವ ಸಂಸ್ಥೆಗಳಾವುವು ?

49. ಸಮೂಹ ಮಾಧ್ಯಮದ ಪ್ರಕಾರಗಳನ್ನು ತಿಳಿಸಿ.

50. ಸಮೂಹ ಮಾಧ್ಯಮಗಳಿಂದ ಭಾರತದ ವಿವಾಹ ವ್ಯವಸ್ಥೆಯಲ್ಲಾದ ಬದಲಾವಣೆಗಳಾವುವು ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

51. ಸಾಮಾಜಿಕ ಬದಲಾವಣೆಯ ಲಕ್ಷಣಗಳನ್ನು ಪಟ್ಟಿ ಮಾಡಿ.

52. ಪ್ರಸ್ತುತ ಸಾಮಾಜಿಕ ಜೀವನದ ಮೇಲೆ ಔಪಚಾರಿಕ ಶಿಕ್ಷಣದ ಪರಿಣಾಮಗಳೇನು ?

53. ಬ್ರಿಟಿಷರ ಕಾಲದಲ್ಲಿ ಮಹಿಳೆಯರ ಜಾಗೃತಿ ಮತ್ತು ಪ್ರಗತಿಗಾಗಿ ಹೋರಾಡಿದ ಮಹಿಳಾ ಸಂಘಟನೆಗಳನ್ನು ಹೆಸರಿಸಿ.

54. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರವನ್ನು ವಿವರಿಸಿ.

55. ಭಾರತ ಸರ್ಕಾರವು ಬುಡಕಟ್ಟುಗಳ ಅಭಿವೃದ್ಧಿಗೆ ರೂಪಿಸಿದ ನೀತಿಗಳನ್ನು ತಿಳಿಸಿ.

56. ಪ್ರಸ್ತುತ ಸಮಾಜದಲ್ಲಿ ಸಮೂಹ ಮಾಧ್ಯಮಗಳ ಪಾತ್ರವೇನು ?

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 1 × 4 = 4**

57. ಜಾತಿ ವ್ಯವಸ್ಥೆಯು ಸಾಮಾಜಿಕ ಬದಲಾವಣೆಗೆ ಅಡ್ಡಿಯಾಗಿದೆ. ಹೇಗೆ ?